

Prix de Rome ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದವನು) ಹಾಕಿಕೊಟ್ಟ ನಕ್ಷೆಯ ಅನುಸಾರ ಚಾರಿತ್ರಿಕ ಹಾಗೂ ಪಾರಂಪರಿಕ ಕಟ್ಟಡಗಳನ್ನು ಮತ್ತು ಡಚ್ ಹಳ್ಳಿಗಳ ವಿಶೇಷತೆಯಾದ ಗಾಳಿಯಂತ್ರಗಳನ್ನು ಇಲ್ಲಿಗೆ ಸಾಗಿಸಿ ತಂದು 1850ರಲ್ಲಿದ್ದ ಡಚ್ ಹಳ್ಳಿಯ ವಾತಾವರಣವನ್ನು ಮರುನಿರ್ಮಾಣ ಮಾಡಲಾಯಿತು. 1959–1976ರ ಅವಧಿಯಲ್ಲಿ ಈ ಕಾರ್ಯ ನಡೆಯಿತು.

ಬಹಳಷ್ಟು ಕಟ್ಟಡಗಳು ಮತ್ತು ಗಾಳಿಯಂತ್ರಗಳು ಶತಮಾನಗಳಷ್ಟು ಹಳೆಯವು. ಕೆಲವನ್ನು ಇಡಿಯಾಗಿ ತಂದರೆ, ಇನ್ನು ಕೆಲವನ್ನು ಕಳಚಿ ತಂದು ಯಥಾವತ್ತಾಗಿ ಮರುಜೋಡಿಸಲಾಗಿದೆ. 1959ರಲ್ಲಿಯೇ ಇಡೀ ಕಟ್ಟಡಗಳನ್ನೇ ಯಥಾವತ್ತಾಗಿ ದೋಣಿಗಳಲ್ಲಿ, ಟ್ರಕ್‌ಗಳಲ್ಲಿ ಸಾಗಿಸಿ ತಂದು ಇಲ್ಲಿ ನಿಲ್ಲಿಸಿರುವುದು ಅದ್ಭುತವೇ ಸರಿ. ಒಂದೊಂದು ಕಟ್ಟಡವೂ ತನ್ನದೇ ಆದ ಕಥೆಯನ್ನು ಹೇಳುವಂತಿದೆ.

1574ರ ಸುಮಾರಿಗೇ ಗಾಳಿಯಂತ್ರಗಳ ಬಳಕೆ ಹಾಲೆಂಡ್‌ನಲ್ಲಿ ಇತ್ತೆಂದು ತಿಳಿದುಬರುತ್ತದೆ. ಎಣ್ಣೆಗಾಣಗಳು, ಮರಗೆಲಸದ ಯಂತ್ರಗಳು, ಗಿರಣಿಗಳು, ಸಂಬಾರ ಪದಾರ್ಥಗಳ ಅರೆಯುವಿಕೆ, ಕಾಗದ ತಯಾರಿಕೆ, ಧಾನ್ಯಗಳಿಂದ ಹಿಟ್ಟುಗಳ ತಯಾರಿಕೆ, ಕೋಕೊ ಪುಡಿ, ಬಣ್ಣ, ನಾರಿನ ತಯಾರಿಕೆ – ಹೀಗೆ ಹಲವು ಉದ್ದೇಶಗಳಿಗೆ ಗಾಳಿಯಂತ್ರಗಳನ್ನು ಬಳಸಲಾಗುತ್ತಿತ್ತು. ಒಂದೊಂದಕ್ಕೂ ಬೇರೆ ಬೇರೆ ವಿಚಿತ್ರ ಹೆಸರುಗಳಿವೆ. ಎತ್ತು, ಬೆಕ್ಕು, ಕುರಿಮರಿ, ಮನೆಯಾತ, ಅನ್ವೇಷಕ, ಚುಕ್ಕಿ ಕೋಳಿ, ಹೀಗೆ ಆಕರ್ಷಕ ಹೆಸರುಗಳು.

18ನೇ ಶತಮಾನದ ಝಾನ್ಸೆ ಪ್ರದೇಶ ಹಲವಾರು ಕೈಗಾರಿಕಾ ಚಟುವಟಿಕೆಗಳಿಗೆ ನೆಲೆಯಾಗಿತ್ತು. 600ಕ್ಕೂ ಹೆಚ್ಚು ಕೈಗಾರಿಕಾ ಗಾಳಿಯಂತ್ರಗಳು ಅಲ್ಲಿದ್ದವಂತೆ. ಆಮ್‌ಸ್ಟರ್‌ಡ್ಯಾಂನಿಂದ ಕಚ್ಚಾ ಪದಾರ್ಥಗಳನ್ನು ತರಿಸಿ ನದಿ ದಡದಲ್ಲಿ ಗಾಳಿತಂತ್ರಗಳನ್ನು ಬಳಸಿ ಹತ್ತು ಹಲವು ವಿಧದ ವಸ್ತುಗಳನ್ನು ತಯಾರಿಸುತ್ತಿದ್ದರಂತೆ. ಝಾನ್ಸೆ ಪ್ರದೇಶವು ಹಾಲೆಂಡಿನ ಅತ್ಯಂತ ಪ್ರಾಚೀನ ಕೈಗಾರಿಕಾ ಪ್ರದೇಶವೆನಿಸಿಕೊಂಡಿತ್ತು. ಡಚ್ಚಿನ ಸುವರ್ಣಯುಗವೆಂದು ಹೇಳಲಾಗುವ ಹದಿನೇಳನೇ ಶತಮಾನದಲ್ಲಿ ಗಾಳಿಯಂತ್ರಗಳು ಮತ್ತು ದೋಣಿಗಳನ್ನು ನಿರ್ಮಿಸುವುದರಲ್ಲಿ ಅಲ್ಲಿನ ಜನರು ಸಿದ್ಧಹಸ್ತರಾಗಿದ್ದರು. ಮುಂದಿನ ದಶಕಗಳಲ್ಲಿ ತಯಾರಿಕೆಯು ತೀವ್ರಗತಿಯಲ್ಲಿ ಹೆಚ್ಚಿ ಅಲ್ಲಿನವರ ಆರ್ಥಿಕ ಸ್ಥಿತಿ ಉನ್ನತ ಮಟ್ಟಕ್ಕೇರಿತು. ಮರವನ್ನು ಕೊಯ್ಯುವುದು, ಹತ್ತರಿ ಹಿಡಿಯುವುದು, ಎಣ್ಣೆ ಬೀಜಗಳಿಂದ ಎಣ್ಣೆಯನ್ನು ಹಿಂಡುವುದು, ಸಂಬಾರ ಪದಾರ್ಥಗಳನ್ನು ಪುಡಿ ಮಾಡುವುದು ಇತ್ಯಾದಿ ಪ್ರಮುಖ ಚಟುವಟಿಕೆಗಳಾಗಿದ್ದವು. ಈ ಎಲ್ಲಾ ವಸ್ತುಗಳನ್ನು ಆಮ್‌ಸ್ಟರ್‌ಡ್ಯಾಂ ಮೂಲಕ ಪ್ರಪಂಚದಾದ್ಯಂತ ರಫ್ತು ಮಾಡಲಾಗುತ್ತಿತ್ತು.

ವ್ಯಾಪಾರಿಗಳು ಕೇವಲ ತಯಾರಿಕೆಯತ್ತ ಗಮನ ಕೊಡದೆ ತಮ್ಮ ವಾಸಗೃಹಗಳನ್ನೂ ಸುಂದರವಾಗಿ ನಿರ್ಮಿಸಿಕೊಳ್ಳುತ್ತಿದ್ದರು. ಅವೆಲ್ಲಾ ಝಾನ್ಸೆ ನದಿಯ ದಂಡೆಯಲ್ಲಿರುತ್ತಿದ್ದವು. ವ್ಯಾಪಾರ ವೃದ್ಧಿಸಿದಂತೆಲ್ಲಾ ತಮ್ಮ ಮನೆಗಳನ್ನೂ ವಿಸ್ತರಿಸಿಕೊಳ್ಳುವುದು ಅವರ ಹವ್ಯಾಸವಾಗಿತ್ತು. ಕೆಲವರು ಹೆಚ್ಚಿನ ಜಾಗವನ್ನು ಕೊಂಡು ಅಲ್ಲಿ ತರಹೇವಾರಿ ತರಕಾರಿ, ಹೂ, ಇತ್ಯಾದಿ ಬೆಳೆಯುತ್ತಿದ್ದರು.

1573ರಲ್ಲಿ ಸ್ಪೇನ್ ದೇಶದವರ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ದಿನದ ನೆನಪಿಗಾಗಿ ಮಂಗಳವಾರದ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಆದರೆ ಪ್ರವಾಸಿಗರ ಸಂಖ್ಯೆ ಹೆಚ್ಚತೊಡಗಿದ ನಂತರ ಈಗ ಯಾರೂ ವಾರದ ರಜೆ ತೆಗೆದುಕೊಳ್ಳುವುದಿಲ್ಲ.

ನೀರ ಕಾಲುವೆಗಳು, ಹಚ್ಚ ಹಸಿರಿನ ಹುಲ್ಲುಹಾಸು, ಮರಗಿಡಗಳು, ಬಾತು ಮುಂತಾದ ಪಕ್ಷಿಗಳು ಇವೆಲ್ಲಾ ಇರುವುದರಿಂದ ಅಲ್ಲಿನ ವಾತಾವರಣ ಆಹ್ಲಾದಕರವಾಗಿರುತ್ತದೆ. ವರ್ಷವರ್ಷವೂ ಈ ಬಯಲು ಸಂಗ್ರಹಾಲಯವು ಹೊಸ ಹೊಸ ವಸ್ತು ವಿಷಯಗಳನ್ನು ಸೇರಿಸಿಕೊಳ್ಳುತ್ತಾ ಹೋಗುತ್ತಿದೆ. ಪಾರಂಪರಿಕ ಮರದ ಶೂ ಫ್ಯಾಕ್ಟರಿ, ಚೀಸ್ ಫ್ಯಾಕ್ಟರಿ, ಕೋಕೊ ಲ್ಯಾಬೋರೇಟರಿ ಇತ್ಯಾದಿ ಸೇರ್ಪಡೆಗೊಂಡಿವೆ. ವಸತಿ ಗೃಹಗಳು, ಶಾಪಿಂಗ್ ಕೇಂದ್ರಗಳು, ಉಪಾಹಾರ ಗೃಹಗಳು ತಲೆ ಎತ್ತಿ ಪ್ರವಾಸಿಗರಿಗೆ ಅನುಕೂಲಗಳನ್ನು ಕಲ್ಪಿಸುತ್ತಿವೆ.

ಝಾನ್ಸೆ ಚಾನ್ಸ್‌ಗೆ ಭೇಟಿ ಕೊಟ್ಟಾಗ ನಾವು ಕಾಲದಲ್ಲಿ ಒಂದೆರಡು ಶತಮಾನಗಳಷ್ಟು ಹಿಂದೆ ಹೋಗಿ ಬಂದಂತಹ ವಿಶಿಷ್ಟ ಅನುಭವವನ್ನು ಹೊಂದುತ್ತೇವೆ. ಮರೆಯಾಗದ ನೆನಪುಗಳನ್ನು ಹೊತ್ತು ತರುತ್ತೇವೆ.





